# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **705** |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ವಿದ್ಯುತ್ ಬೇಡಿಕೆ ಪ್ರಮಾಣವೆಷ್ಟು; ಪ್ರಸ್ತುತ ಪೂರೈಸುತ್ತಿರುವ ವಿದ್ಯುತ್ ಪ್ರಮಾಣವೆಷ್ಟು; (ವಿಭಾಗವಾರು ವಿವರ ನೀಡುವುದು) | ರಾಜ್ಯದಲ್ಲಿ 2024-25 ರಲ್ಲಿ ಅಂದಾಜಿಸಲಾದ ವಿದ್ಯುತ್ ಬೇಡಿಕೆಯ ಪ್ರಮಾಣ 92082 ಮಿ.ಯೂ ಇದ್ದು, ಸದರಿ ಬೇಡಿಕೆಯ ದಿನವಹಿ ಸರಾಸರಿ ಪರಿಮಾಣವು ಏಪ್ರಿಲ್-24 ರಿಂದ ಮೇ-24 ರ ಅಂತ್ಯದವರೆಗೆ 281.4 ಮಿ.ಯೂ ಗಳಾಗಿರುತ್ತದೆ.<br><br>ರಾಜ್ಯದಲ್ಲಿ ಪ್ರಸ್ತುತ 2024-25ನೇ ಸಾಲಿನ (ಏಪ್ರಿಲ್-2024ರಿಂದ ಮೇ-2024ರ ಅಂತ್ಯದವರೆಗೆ) ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ: |

| **ಕ್ರ. ಸಂ** | **ವಿದ್ಯುತ್ತಿನ ಮೂಲಗಳು** | **2024-25ನೇ ಸಾಲಿನ (ಏಪ್ರಿಲ್-24 ರಿಂದ ಮೇ -24 ರ ಅಂತ್ಯದವರೆಗೆ) ಲಭ್ಯವಾದ ವಿದ್ಯುತ್ತಿನ ಪ್ರಮಾಣ ಮಿ.ಯೂ.ಗಳಲ್ಲಿ (ತಾತ್ಕಾಲಿಕ)** |
|---|---|---|
| 1) | ಜಲ ವಿದ್ಯುತ್ | 1101 |
| 2) | ಶಾಖೋತ್ಪನ್ನ (ಉಷ್ಣ ವಿದ್ಯುತ್) | 4020 |
| 3) | ಪವನ ವಿದ್ಯುತ್ | 1137 |
| 4) | ಸೌರ ವಿದ್ಯುತ್ | 1992 |
| 5) | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 7454 |
| 6) | **ಇತರೆ ಮೂಲಗಳಿಂದ:** | |
| | ಕ್ಯಾಪ್ಟಿವ್ | 71 |
| | ಮಿನಿ ಹೈಡಲ್ | 50 |
| | ಕೋ- ಜನರೇಷನ್ | 186 |
| | ಬಯೋಮಾಸ್ | 02 |
| | ಹೈಬ್ರಿಡ್ (Wind + solar) | 225 |
| 7) | ಬೃಹತ್ ಐ.ಪಿ.ಪಿ. | 1174 |
| 8) | ಜಿಂದಾಲ್ | 102 |
| | **ಒಟ್ಟು** | **17514** |

ಆ) ಕಿರು ಜಲವಿದ್ಯುತ್ ಯೋಜನೆಗಳು ಸೇರಿದಂತೆ ರಾಜ್ಯದಲ್ಲಿ ಉತ್ಪಾದನೆಯಲ್ಲಿನ ವಿವಿಧ ಮೂಲಗಳಾವುವು; ವರ್ಷವಾರು ವಿದ್ಯುತ್ ಉತ್ಪಾದನೆಯ ಪ್ರಮಾಣದ ಘಟಕವಾರು ಮಾಹಿತಿಯೊಂದಿಗೆ ವಿವರ ನೀಡುವುದು)

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಿರು ಜಲವಿದ್ಯುತ್ ಸೇರಿದಂತೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ:

| ಕ್ರ. ಸಂ | ವಿದ್ಯುತ್ತಿನ ಮೂಲಗಳು | 2021-22ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ ಮಿ.ಯೂ. ಗಳಲ್ಲಿ | 2022-23ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ ಮಿ.ಯೂ. ಗಳಲ್ಲಿ | 2023-24ನೇ ಸಾಲಿನಲ್ಲಿ ಲಭ್ಯವಾದ ವಿದ್ಯುತ್ತಿನ ಪ್ರಮಾಣ ಮಿ.ಯೂ. ಗಳಲ್ಲಿ |
|---|---|---|---|---|
| 1) | ಜಲ ವಿದ್ಯುತ್ | 13740 | 13229 | 8846 |
| 2) | ಶಾಖೋತ್ಪನ್ನ (ಉಷ್ಣ ವಿದ್ಯುತ್) | 17144 | 16772 | 20287 |
| 3) | ಪವನ ವಿದ್ಯುತ್ | 9377 | 9204 | 9628 |
| 4) | ಸೌರ ವಿದ್ಯುತ್ | 9281 | 9707 | 10848 |
| 5) | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 18422 | 22798 | 36698 |
| 6) | **ಇತರೆ ಮೂಲಗಳಿಂದ:** | | | |
| | ಕ್ಯಾಪ್ಟಿವ್ | 199 | 208 | 324 |
| | ಮಿನಿ ಹೈಡಲ್ | 2346 | 2307 | 1315 |
| | ಕೋ- ಜನರೇಷನ್ | 2803 | 2938 | 2754 |
| | ಬಯೋಮಾಸ್ | 174 | 109 | 48 |
| | ಹೈಬ್ರಿಡ್ (Wind + solar) | 0 | 819 | 1013 |
| 7) | ಬೃಹತ್ ಐ.ಪಿ.ಪಿ. | 1560 | 1271 | 5282 |
| 8) | ಜಿಂದಾಲ್ | 631 | 1116 | 1825 |
| | **ಒಟ್ಟು** | **75677** | **80478** | **98868** |

ಇ) ರಾಜ್ಯದಲ್ಲಿ ಜಲವಿದ್ಯುತ್, ಪವನ ವಿದ್ಯುತ್ ಮತ್ತಿತರ ವಿದ್ಯುತ್ ಉತ್ಪಾದಕ ಯೋಜನೆಗಳಿಗೆ ಹೆಚ್ಚಿನ ಉತ್ತೇಜನ ನೀಡಲು ಸರ್ಕಾರ ಯೋಜನಾವಾರು ಕೈಗೊಂಡಿರುವ ಕ್ರಮಗಳು ಯಾವುವು; ಜಲವಿದ್ಯುತ್ ಯೋಜನೆಗಳ ನಿರ್ವಹಣೆಗೆ ಸರ್ಕಾರ ಬಿಡುಗಡೆ ಮಾಡಿದ ಮೊತ್ತ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು? (ವಿವರ ನೀಡುವುದು)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಮುಂಬರುವ ಜಲವಿದ್ಯುತ್, ಪವನ ವಿದ್ಯುತ್ ಮತ್ತಿತರ ವಿದ್ಯುತ್ ಯೋಜನೆಗಳು ಮತ್ತು ನಿರೀಕ್ಷಿತ ಕಾರ್ಯಾರಂಭಗೊಳಿಸುವ ವರ್ಷದ ವಿವರಗಳನು **ಅನುಬಂಧ** ದಲ್ಲಿ ಒದಗಿಸಲಾಗಿದೆ.

ಜಲ ವಿದ್ಯುತ್ ಯೋಜನೆಗಳ ನಿರ್ವಹಣೆಗೆ ಸರ್ಕಾರ ಯಾವುದೇ ಮೊತ್ತವನ್ನು ಮಂಜೂರು ಮಾಡಿರುವುದಿಲ್ಲ.

ಪವನ ವಿದ್ಯುತ್ ಸೇರಿದಂತೆ ಎಲ್ಲಾ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಉತ್ತೇಜನ ನೀಡಲು ಸರ್ಕಾರವು ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ಜಾರಿಗೊಳಿಸಿದ್ದು, ಈ ನೀತಿಯಡಿ ಸ್ವಯಂ ಬಳಕೆ, ಸಮೂಹ ಸ್ವಯಂಬಳಕೆ, ಮೂರನೇ ವ್ಯಕ್ತಿ Renewable Energy Purchase Obligation (RPO) ಮತ್ತು ಖಾಸಗಿ ಪಾರ್ಕ್ ವರ್ಗಗಳಡಿ ಯೋಜನೆಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯ ಸರ್ಕಾರದಿಂದ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಒತ್ತು ನೀಡುವ ನಿಟ್ಟಿನಲ್ಲಿ ಕಾಲಕಾಲಕ್ಕೆ ನೀತಿಗಳನ್ನು ಜಾರಿಗೆ ತರಲಾಗುತ್ತಿದೆ. ಪ್ರಸ್ತುತ ನವೀಕರಿಸಬಹುದಾದ ಇಂಧನ ನೀತಿ 2022-27 ಜಾರಿಯಲ್ಲಿರುತ್ತದೆ. ಸದರಿ ನೀತಿಗಳಡಿ ಅವಕಾಶ ಕಲ್ಪಿಸಿದಂತೆ ಸ್ಪರ್ಧಾತ್ಮಕ ಬಿಡ್ ವರ್ಗದಡಿ, ಸ್ವಯಂ ಬಳಕೆ, ಸಮೂಹ ಬಳಕೆ, ಮೂರನೇ ವ್ಯಕ್ತಿ ಮಾರಾಟ ಮತ್ತು ಖಾಸಗಿ

ಪಾರ್ಕ್ ವರ್ಗಗಳಡಿ ಜೂನ್ 2024 ರ ಅಂತ್ಯಕ್ಕೆ 40116 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳ ಹಂಚಿಕೆ ಮಾಡಲಾಗಿದ್ದು, ಇವುಗಳಲ್ಲಿ 18206 ಮೆ.ವ್ಯಾ ನಷ್ಟು ಯೋಜನೆಗಳು ಅನುಷ್ಠಾನಗೊಂಡಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ನವೀಕರಿಸಬಹುದಾದ ಇಂಧನ ಮೂಲ | ಅನುಷ್ಠಾನಗೊಂಡಿರುವ ಸಾಮರ್ಥ್ಯ ಮೆ.ವ್ಯಾನಲ್ಲಿ |
|---|---|---|
| 1 | ಪವನ ವಿದ್ಯುತ್ | 6591.16 |
| 2 | ಕಿರು ಜಲ | 940.44 |
| 3 | ಸೌರ ವಿದ್ಯುತ್ (Ground mounted) | 8193.20 |
| 4 | ಸೌರ ವಿದ್ಯುತ್ (Rooftop,Off grid, & Suryaraitha ಸೇರಿ) | 610.74 |
| 5 | ಜೈವಿಕ ಇಂಧನ | 139.03 |
| 6 | ಸಹ - ವಿದ್ಯುತ್ | 1731.16 |
| | **ಒಟ್ಟು** | **18205.73** |

ಕ್ರೆಡಲ್ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. ಪ್ರಾಯೋಗಿಕವಾಗಿ ಪಾವಗಡ ಸೋಲಾರ್ ಪಾರ್ಕ್ ನಲ್ಲಿ 2MW/4.5MWhr ಸಾಮರ್ಥ್ಯದ ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಸದರಿ ಘಟಕವನ್ನು ಸೆಪ್ಟೆಂಬರ್ 2024 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.
2. ಪಾವಗಡ ತಾಲ್ಲೂಕಿನ Ryapte ಗ್ರಾಮದಲ್ಲಿ 2000 MW ಸಾಮರ್ಥ್ಯದ RE ಪಾರ್ಕ್ ಸ್ಥಾಪನೆ. ಸದರಿ ಪಾರ್ಕ್ ಅನ್ನು ಮಾರ್ಚ್ 2027 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.
3. ಪಾವಗಡ ಸೋಲಾರ್ ಪಾರ್ಕ್ ನಲ್ಲಿ 300 MW ವಿಕೇಂದ್ರಿಕೃತ ಸೌರ ವಿದ್ಯುತ್ ಯೋಜನೆಯ ಸ್ಥಾಪನೆ. ಸದರಿ ಯೋಜನೆಯು ಜನವರಿ 2026 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.
4. ಕಲಬುರ್ಗಿಯಲ್ಲಿ 100MW ಸೋಲಾರ್ /100MWhr (BESS) ಸ್ಥಾಪನೆ. ಸದರಿ ಯೋಜನೆಯು ಏಪ್ರಿಲ್ 2026 ರಲ್ಲಿ ಅನುಷ್ಠಾನಗೊಳ್ಳಲಿದೆ.
5. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ 500 MW ಸೋಲಾರ್ ಪಾರ್ಕ್ ಸ್ಥಾಪಿಸಲು ಉದ್ದೇಶಿದೆ.
6. ಪ್ರತಿ ಎಸ್ಕಾಂ ವ್ಯಾಪ್ತಿಯ ಆಯ್ದ ಒಂದು ಹಿಂದುಳಿದ ಗ್ರಾಮದಲ್ಲಿ ಪ್ರಾಯೋಗಿಕವಾಗಿ ಮೈಕ್ರೋಗ್ರಿಡ್ ವ್ಯವಸ್ಥೆಯ (Microgrid) ಮೂಲಕ ಬ್ಯಾಟರಿ ಶೇಖರಣೆಯನ್ನು ಹೊಂದಿದ 500 kW ಸಾಮರ್ಥ್ಯದ ಸೌರ ಘಟಕದ ಸ್ಥಾಪಿಸಲು ಉದ್ದೇಶಿದೆ.
7. ರಾಜ್ಯದಲ್ಲಿ ಕೃಷಿ ಕ್ಷೇತ್ರದ ಅಭಿವೃದ್ದಿಗಾಗಿ PM-KUSUM (Pradhan Mantri Kisan Urja Suraksha Evam Uttan Mahabhiyan) Component- B ಯೋಜನೆಯಡಿ ಸೌರಚಾಲಿತ ಕೃಷಿ ಪಂಪ್ ಸೆಟ್ ಅಳವಡಿಸುವ ಯೋಜನೆಯನ್ನು ಜಾರಿಗೊಳಿಸಿದೆ. ಸೌರ ಪಂಪ್ ಸೆಟ್ ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ 30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇ 30 ರಷ್ಟು ಇರುವ ಸಹಾಯಧನವನ್ನು ಶೇ 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ಉಳಿದ ಶೇ 20 ರಷ್ಟು ಭಾಗವನ್ನು ಫಲಾನುಭವಿಗಳಿಂದ ಪಡೆಯಲು ರಾಜ್ಯ ಸರ್ಕಾರವು ಅನುಮೋದಿಸಿರುತ್ತದೆ.
8. ಅಭಿವೃದಿದಾರರುಗಳು ಪವನ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಅನುಕೂಲವಾಗಲು ತಾಲ್ಲೂಕುವಾರು ಪವನ ವಿದ್ಯುತ್ ಸಂಭವನೀಯ ಸಾಮರ್ಥ್ಯವನ್ನು NIWE, Chennai ಸಂಸ್ಥೆಯಿಂದ ಪಡೆದು KREDL Website ನಲ್ಲಿ ಪ್ರಕಟಿಸಲಾಗಿದೆ.
9. ಈಗಾಗಲೇ ಸ್ಥಾಪಿಸಿರುವ ಪವನ ವಿದ್ಯುತ್ ಯೋಜನೆಗಳ ಕಡಿಮೆ ಸಾಮರ್ಥ್ಯದ ವಿಂಡ್ ಟರ್ಬೈನ್‌ಗಳ ಬದಲಾಗಿ ಪ್ರಸ್ತುತ ಹೆಚ್ಚಿನ ಸಾಮರ್ಥ್ಯವಿರುವ ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು (Repowering) ಅವಕಾಶ ಕಲ್ಪಿಸಲಾಗಿದೆ.

| | | |
|---|---|---|
| | | 10. ಈಗಾಗಲೇ ಸ್ಥಾಪಿಸಿರುವ ಪವನ ವಿದ್ಯುತ್ ಯೋಜನೆಗಳ ಜೊತೆಗೆ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು (Hybridization) ಸಹ ಅವಕಾಶ ಕಲ್ಪಿಸಲಾಗಿದೆ.<br>11. ಪಿ. ಎಮ್. ಕುಸುಮ್ 'ಸಿ' ಯೋಜನೆಯಡಿಯಲ್ಲಿ ಹಗಲಿನ ವೇಳೆ ನಿರಂತರವಾಗಿ ರೈತರುಗಳ ಕೃಷಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಪೂರೈಸಲು ಫೀಡರ್ ಸೌರೀಕರಣವನ್ನು ಹಮ್ಮಿಕೊಂಡಿದ್ದು, ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಪ್ರತಿ ಮೆ. ವ್ಯಾ ಗೆ ಒಂದು ಕೋಟಿ ಐದು ಲಕ್ಷ ರೂಪಾಯಿಗಳ ಸಹಾಯ ಧನ ನೀಡಲಾಗುತ್ತಿದೆ. |

ಸಂಖ್ಯೆ: ಎನರ್ಜಿ 200 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ಅನುಬಂಧ

**<u>ಕವಿನಿನಿಯ ಮುಂಬರುವ ಯೋಜನೆಗಳು ಮತ್ತು ನಿರೀಕ್ಷಿತ ಕಾರ್ಯಾರಂಭಗೊಳಿಸುವ ವರ್ಷದ ವಿವರಗಳು ಈ ಕೆಳಕಂಡಂತಿವೆ:</u>**

| ನಿರೀಕ್ಷಿತ ವರ್ಷ | ಕವಿನಿನಿಯ ಮುಂಬರುವ ಯೋಜನೆಗಳು | MW |
|---|---|---|
| 2024-25 | ಯಲಹಂಕ ಅನಿಲಾಧಾರಿತ ವಿದ್ಯುತ್ ಯೋಜನೆ | 370 |
| | ವೇಸ್ಟ್ ಟು ಎನರ್ಜಿ ವಿದ್ಯುತ್ ಯೋಜನೆ | 11.5 |
| 2025-26 | KPCL ಥರ್ಮಲ್ ಪ್ಲಾಂಟ್ಸ್ (Bidadi ,RTPS, YTPS & BTPS) ಆವರಣದಲ್ಲಿ ಭೂಸ್ಥಾಪಿತ ಸೌರ ಯೋಜನೆ | 58 |
| | | 40 |
| | | 50 |
| | | 22 |
| | ತೇಲುವ ಸೌರ ಯೋಜನೆ | 100 |
| 2026-27 | ತೇಲುವ ಸೌರ ಯೋಜನೆ –I | 200 |
| 2027-28 | ತೇಲುವ ಸೌರ ಯೋಜನೆ - II | 400 |
| 2028-29 | ಗೋದ್ನಾ ಶಾಖೋತ್ಪನ್ನ ವಿದ್ಯುತ್ ಯೋಜನೆ | 1600 |
| 2029-30 | ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ | 2000 |
| 2030-31 | ವರಾಹಿ ಪಂಪ್ಡ್ ಸ್ಟೋರೇಜ್ ಯೋಜನೆ | 1500 |
| 2031-32 | ನೇತ್ರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ -I | 1500 |
| 2032-33 | ನೇತ್ರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ -II | 2500 |
| **ಒಟ್ಟು** | | **10351.5** |